(ಇ) ಆಮದನ್ನು ಕೇಂದ್ರ ರೇಷ್ಮೆ ಮಂಡಳಿಯ ಮೂಲಕ ಮಾತ್ರ ಮಾಡಿ ವಿತರಿಸುವುದು.

(ಈ) ವಶಪಡಿಸಿದ ರೇಷ್ಮೆಯನ್ನು ಸರ್ಕಾರಿ ಸಂಸ್ಥೆಗಳ ಮೂಲಕ ಹರಾಜು ಮಾಡುವುದು.

(ಉ) ಕಳ್ಳ ಸಾಗಾಣಿಕೆಯನ್ನು ತಡೆಗಟ್ಟುವುದು.

3. ಮಾರುಕಟ್ಟೆಯಲ್ಲಿ ರೇಷ್ಮೆ ಗೂಡು:ರೇಷ್ಮೆ ಧಾರಣೆಗಳ ದೃಢತೆಗಾಗಿ ಸರ್ಕಾರಿ ಸಂಸ್ಥೆಗಳಾದ ಕೆ.ಎಸ್.ಐ.ಸಿ.ಕೆ.ಎಸ್.ಎಂ.ಬಿ. ಗಳಿಗೆ ರೇಷ್ಮೆ ಗೂಡು:ರೇಷ್ಮೆಯನ್ನು ಖರೀದಿಸಲು ಹಣ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

4. ಕಾಯಿದೆ ಜಾರಿ ವಿಭಾಗದ ಕೆಲಸ ಕಾರ್ಯಗಳನ್ನು ಪುನಃ ಆರಂಭಿಸಿ ಅನಧಿಕೃತ ರೇಷ್ಮೆ ವಹಿವಾಟನ್ನು ನಿಯಂತ್ರಿಸುವುದು.

ರಾಜ್ಯದಲ್ಲಿ ವೈದ್ಯರ ಕೊರತೆ

96(234): ಶ್ರೀ ಅತ್ಯಾನಂದ ಎಂ.ಎಸ್. (ಮಂಡ್ಯ) ಈ ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ ಪಶುವೈದ್ಯರ ಕೊರತೆ ಇರುವುದನ್ನು ಸರ್ಕಾರವು ಗಮನಿಸಿದೆಯೇ?

ಆ. ಹಾಗಿದ್ದಲ್ಲಿ ಕೊರತೆ ಇರುವ ಪಶುವೈದ್ಯರ ಸಂಖ್ಯೆ ಎಷ್ಟು?

ಇ. ಈ ಕೊರತೆ ನಿವಾರಿಸಲು ಸರ್ಕಾರವು ಕ್ರಮ ಕೈಗೊಂಡಿದ್ದಲ್ಲಿ ವಿವರಗಳನ್ನು ನೀಡುವುದು.

ಈ. ಮಂಡ್ಯ ಜಿಲ್ಲೆಯಲ್ಲಿ ಪಶುವೈದ್ಯರ ಕೊರತೆ ನಿವಾರಿಸಲು ಸರ್ಕಾರವು ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಎಂ. ಮಹದೇವ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಹೌದು

ಆ. 777

ಇ. ಪ್ರಪ್ರಥಮವಾಗಿ 250 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ. ನೇಮಕಾತಿ ಮುಖಾಂತರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.